

# ಮಗುವಿನ ಕನಸು ಐ.ವಿ.ಎಫ್‌ನಿಂದ ನನಸು



## ಪ್ರಶ್ನೆ? ಪರಿಹಾರ

ಡಾ|| ಆಶಾ. ಎಸ್.ವಿಜಯ್
ಗರ್ಭಗುಡಿ ಐವಿಎಫ್ ಸೆಂಟರ್
9886915556/ 080-26673777

**ಅಂಡಾಶಯದಲ್ಲಿ ಅಂಡಾಣು ಇರದಿದ್ದರೂ ಮಕ್ಕಳಾಗಬಹುದು ಎನ್ನುವುದು ಈಗ ಸಾಬೀತಾಗುತ್ತಿದೆ. ಐ.ವಿ.ಎಫ್. ಮಕ್ಕಳಿಲ್ಲ ಎನ್ನುವವರ ಪಾಲಿಗೆ ಭರವಸೆ ಆಗಿದೆ. ಸಮಸ್ಯೆ ಅರಿಯದೇ ಪರಿಹಾರ ಹುಡುಕಿದರೆ ಅದು ದೊರೆಯಲಾರದು. ಯಾವುದೇ ಚಿಕಿತ್ಸೆಗೂ ಮೊದಲು ತೊಂದರೆ ಏನು ಎನ್ನುವುದನ್ನು ತಿಳಿದುಕೊಳ್ಳಲೇ ಬೇಕು. ಮುಖ್ಯವಾಗಿ ನಾವು ನಮ್ಮಲ್ಲಿ ಇರಬಹುದಾದ ದೋಷಗಳನ್ನು ಒಪ್ಪಿಕೊಂಡು ಚಿಕಿತ್ಸೆಗೆ ಸಹಕರಿಸಿದಾಗಲೇ ಉತ್ತಮ ಫಲಿತಾಂಶ ಸಿಗುತ್ತದೆ**

ದೂರದ ಊರಿನಿಂದ 2 ವರ್ಷಗಳ ಹಿಂದೆ ಮದುವೆಯಾಗಿದ್ದ ದಂಪತಿಗಳಿಬ್ಬರು ಸಂತಾನ ಚಿಕಿತ್ಸೆಗಾಗಿ ಬಂದಿದ್ದರು. ಅವರಿಬ್ಬರೂ ಬೇರೆ ಬೇರೆ ನಗರಗಳಲ್ಲಿ ಕೆಲಸ ಮಾಡುತ್ತಿದ್ದರಿಂದ ಅವರಿಬ್ಬರ ಮಧ್ಯೆ ಲೈಂಗಿಕ ಚಟುವಟಿಕೆ ಅಪರೂಪವಾಗಿತ್ತು. ಅದಾಗ್ಯೂ ಅವರ ಲೈಂಗಿಕ ಕ್ರಿಯೆ ಸಂದರ್ಭದಲ್ಲಿ ನೋವು ಅನುಭವಿಸುತ್ತಿದ್ದರು. ಪರಸ್ಪರ ಸಹಜ ಲೈಂಗಿಕ ಜೀವನ ಅನುಭವಿಸಲು ಸಾಧ್ಯವಾಗುತ್ತಿಲ್ಲ ಮತ್ತು ನೈಸರ್ಗಿಕವಾಗಿ ಗರ್ಭಧಾರಣೆ ಕೂಡ ಆಗುತ್ತಿಲ್ಲ ಎಂಬ ಕೊರಗು ಆ ದಂಪತಿಗಳನ್ನು ಪೀಡಿಸತೊಡಗಿತ್ತು.

ನಂತರದ ದಿನಗಳಲ್ಲಿ ಇವರು ಫರ್ಟಿಲಿಟಿ ತಜ್ಞರನ್ನು ಭೇಟಿಯಾಗಿದ್ದಾರೆ. ತಜ್ಞರು ಟ್ರಾನ್ಸ್ ವೆಜಿನಲ್ ಸ್ಕ್ಯಾನ್ ತಪಾಸಣೆ ಕೈಗೊಂಡಾಗ, ಗರ್ಭಾಶಯದಿಂದ ಯೋನಿವರೆಗಿನ ನಾಳಮಾರ್ಗ ಸಂಕುಚಿತಗೊಂಡಿರುವುದು ಕಂಡುಬಂದಿದೆ. ಇದನ್ನು ಹಿಪ್ಟೊಲ್ಯಾಪರೊಸ್ಕೊಪಿ ಸಮಯದಲ್ಲಿ ರೆಕ್ಟೊಸ್ಕೋಪ್ ಮೂಲಕ ನಿವಾರಿಸಲಾಯಿತು.

3 ಅವಧಿಗೆ ಐವಿಐ ನೀಡಲಾಯಿತು. ಅದಾಗ್ಯೂ ಅದು ವಿಫಲಗೊಂಡಿತ್ತು. ಹೀಗಾಗಿ ಐವಿಎಫ್ ಮಾಡುವುದೆಂದು ನಿರ್ಧರಿಸಲಾಯಿತು. ಸ್ಟಿಮುಲೇಶನ್ ಆರಂಭಿಸಲಾಯಿತು ಮತ್ತು ಅಂಡಾಣುವನ್ನು ಪುನಶ್ಚೇತನಗೊಳಿಸಲಾಯಿತು. ಭ್ರೂಣವನ್ನು ಸೃಷ್ಟಿಸಿ ಬೆಳೆಸಲಾಯಿತು ಮತ್ತು ಶೀತಲೀಕರಣಗೊಳಿಸಲಾಯಿತು.

ಮುಂದಿನ ಅವಧಿಯಲ್ಲಿ, ಎಂಡೊಮೆಟ್ರಿಯಲ್ ಬೆಳವಣಿಗೆಗಾಗಿ ಜಿ–ಸಿಎಸ್‌ಎಫ್ ಇಂಟ್ರಾಕುಟೆರೈನ್ ಲಸಿಕೆ ನೀಡಿದ ಬಳಿಕ ಶೀತಲಿಕೃತ ಭ್ರೂಣವನ್ನು ವರ್ಗಾಯಿಸಲಾಯಿತು. ಮುಂದಿನ ಅವಧಿಯಲ್ಲಿ ಆ ಮಹಿಳೆ ಗರ್ಭವತಿಯಾಗಿದ್ದರು. ಇದೀಗ ಅವರಿಗೆ ಒಂದು ಆರೋಗ್ಯವಂತ ಗಂಡು ಮಗು ಜನಿಸಿದೆ.

ಇಂದಿನ ಅನಾರೋಗ್ಯಕರ ಜೀವನಶೈಲಿ, ಅನುವಂಶಿಕ ಸ್ಥಿತಿಗತಿ ಮತ್ತು ಪರಿಸರ ವೈಪರಿತ್ಯಗಳಿಂದಾಗಿ ಸ್ತ್ರೀ ಮತ್ತು ಪುರುಷ ಎಲ್ಲರಲ್ಲೂ ಅಂಡಾಣು ಮತ್ತು ವೀರ್ಯಾಣುಗಳ ಪ್ರಮಾಣ ಮತ್ತು ಗುಣಮಟ್ಟದ ಆತಂಕವನ್ನು ಎದುರಿಸುವಂತಾಗಿದ್ದು, ಇದು ಮನುಕುಲಕ್ಕೆ ಒಂದು ಎಚ್ಚರಿಕೆ ಗಂಟೆಯಾಗಿ ಪರಿಣಮಿಸಿದೆ!

ಶೇಕಡ 1 ರಿಂದ 2 ರಷ್ಟು ಸಂತಾನರಹಿತ ಮಹಿಳೆಯರಲ್ಲಿ ಸಾಮಾನ್ಯವಾಗಿ ಯುಟೆರೈನ್ ಅನಾಮಲಿ ಸಮಸ್ಯೆ ಕಂಡುಬರುತ್ತದೆ. ಮಹಿಳೆಯರು ನೈಸರ್ಗಿಕವಾಗಿ ಗರ್ಭಧರಿಸುವುದರಿಂದಾಗಿ ಸಾಕಷ್ಟು ಅನಾಮಲಿಗಳು ಗಮನಕ್ಕೆ ಬಾರದಿರುತ್ತವೆ. ಮಗು ಜನಿಸುವ ಸಂದರ್ಭದಲ್ಲಿ ಮಾತ್ರ ಇದು ಗೋಚರಿಸಬಹುದಾಗಿರುತ್ತದೆ. ಆದರೆ ಸೆಪ್ಟಾಟಿಕ್ ಯುಟೆರಸ್, ಬೈಕಾಸ್ಮಾಟಿಕ್ ಯುಟೆರಸ್, ಯುನಿಕಾಸ್ಮಾಟಿಕ್ ಯುಟೆರಸ್‌ನಂತಹ ಕೆಲವು ಅನಾಮಲಿಗಳ ಸಂದರ್ಭದಲ್ಲಿ ಗಂಭೀರ ಶಸ್ತ್ರಚಿಕಿತ್ಸೆ ಎದುರಿಸಬೇಕಾಗುತ್ತದೆ. ಆದ್ದರಿಂದ ಗರ್ಭಧಾರಣೆಯಲ್ಲಿ ಸಮಸ್ಯೆಯನ್ನು ಎದುರಿಸುತ್ತಿರುವ ದಂಪತಿಗಳು ಕಡ್ಡಾಯವಾಗಿ 3ಡಿ ಸ್ಕ್ಯಾನ್‌ಗೆ ಒಳಗಾಗಿ ಯುಟೆರೈನ್ ಅನಾಮಲಿಗಳನ್ನು ನಿವಾರಿಸಿಕೊಳ್ಳುವುದು ಒಳಿತು. ಒಂದು ಬಾರಿ ಅನಾಮಲಿ ಪತ್ತೆಯಾದ ಬಳಿಕ ಅದನ್ನು ಹೈಪಟ್ಕೊ ಲ್ಯಾಪರಸ್ಕೋಪಿ ಮೂಲಕ ಸರಿಪಡಿಸಬಹುದು.

ಕಂಜೆಂಕ್ಷನ್ ಬಳಿಕ ಕೆಲವರಲ್ಲಿ ಗರ್ಭಪಾತ ತಡೆಗಟ್ಟಲು ಸರ್ವಿಕಲ್ ....... ಅವಶ್ಯವಾಗಬಹುದು. ಇಲ್ಲವಾದಲ್ಲಿ ಸರಳವಾದ, ಕ್ಲಿಷ್ಟರಹಿತ ಜನನ ಉಂಟಾಗುತ್ತದೆ.

ಆದರೆ, ಇತ್ತೀಚೆಗಿನ ವೈಜ್ಞಾನಿಕ ಮತ್ತು ತಂತ್ರಜ್ಞಾನ ಆಧಾರಿತ ಸುಧಾರಣೆಗಳಿಂದಾಗಿ ಅಂಡಾಶಯ ವೈಫಲ್ಯತೆಗೆ ಈಡಾಗಿರುವ, ವೀರ್ಯಾಣು ವಿಶ್ಲೇಷಣೆ ಶೂನ್ಯವಿರುವ, ಕುಂಠಿತ ವೀರ್ಯಾಣು ಚಲನಶೀಲತೆಯಿಂದ ಬಳಲುತ್ತಿರುವವರಿಗೆ, ಕಳಪೆ ಮಾರ್ಫಾಲಜಿ ಇತ್ಯಾದಿಗಳ ಸಮಸ್ಯೆಗೆ ಒಳಗಾಗಿರುವವರಿಗೆ ಸಾಕಷ್ಟು ನೆರವಾಗಿದೆ. ಭೂಮಿಯ ಮೇಲಿನ ಪ್ರತಿಯೊಬ್ಬರಿಗೂ ಗರ್ಭಧಾರಣೆಯಲ್ಲಿ ಉಪಯುಕ್ತವಾಗಬಲ್ಲ ಅತ್ಯುತ್ತಮ ದಾನಿ ಅಂಡಾಣು ಕಾರ್ಯಕ್ರಮ, ದಾನಿ ವೀರ್ಯಾಣು ಕಾರ್ಯಕ್ರಮ, ಸುಮೊಪಸಿ ಕಾರ್ಯಕ್ರಮಗಳು ನಮ್ಮಲ್ಲಿ ಲಭ್ಯವಿರುತ್ತವೆ.

## ಪ್ರಶ್ನೆ ಪರಿಹಾರ

**ಇನ್ನೂ ಯಾಕೆ ಮಕ್ಕಳಾಗುತ್ತಿಲ್ಲ, ತೊಂದರೆ ಏನಿರಬಹುದು?**

ಇತ್ಯಾದಿ ನಿಮ್ಮ ಪ್ರಶ್ನೆಗಳಿಗೆ ಈ ಅಂಕಣದಲ್ಲಿ ತಜ್ಞ ವೈದ್ಯರು ಉತ್ತರಿಸುತ್ತಾರೆ. ನಿಮ್ಮ ಪ್ರಶ್ನೆಗಳನ್ನು ಈ ವಿಳಾಸಕ್ಕೆ ಕಳುಹಿಸಿ 210/ಎ, 50 ಅಡಿ ರಸ್ತೆ, 14ನೇ ಮುಖ್ಯ ರಸ್ತೆ, ಹನುಮಂತನಗರ, ಬೆಂಗಳೂರು–560 050

**ದೂರವಾಣಿ/ಎಸ್ಎಂಎಸ್: 98869 15556 / 8884183338 / 9148038971** Toll Free: 1-800-200-8288